

بسم اللهِ الرّحمٰن الرّحيم

# ಖಿಲಾಫತ್ ಮತ್ತು ನಮ್ಮ ಜವಾಬ್ದಾರಿಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‍ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‍ನ **'ಮಸ್ಜಿದ್ ಮುಬಾರಕ್'** ನಿಂದ **28–05–2021** ರಂದು ನೀಡಿದ **ಜುಮುಅ ಖುತ್‍ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‍ರಿಹಿಲ್ ಅಝೀಝ್ ಸೂರಃ ಅನ್ನೂರ್‍ನ 56 ಮತ್ತು 57 ವಚನಗಳನ್ನು ಪಠಿಸಿ ಅವುಗಳ ಅರ್ಥವನ್ನು ವಿವರಿಸಿದ ನಂತರ ಹೀಗೆ ಹೇಳಿದರು:*

ಮೇ 27ರ ದಿನಾಂಕವನ್ನು ನಾವು ಖಿಲಾಫತ್ ದಿನವಾಗಿ ಆಚರಿಸುತ್ತೇವೆ. ಜಮಾಅತಿನ ಚರಿತ್ರೆಯ ಮತ್ತು ಖಿಲಾಫತಿಗೆ ಸಂಬಂಧಿಸಿ ನಮ್ಮ ಹೊಣೆಗಾರಿಕೆಗಳನ್ನು ಅರಿಯಲಿಕ್ಕಾಗಿ ಖಿಲಾಫತ್ ದಿನದಂದು ಜಮಾಅತಿನಲ್ಲಿ ಕಾರ್ಯಕ್ರಮಗಳು ಸಂಘಟಿಸಲಾಗುತ್ತವೆ. ಈ ಕಾಲದಲ್ಲಿ ಅಲ್ಲಾಹನು ಕಳುಹಿಸಿದ ಸಂದೇಶವಾಹಕನನ್ನು ನಂಬುವ ಮತ್ತು ಖಿಲಾಫತಿಗೆ ಬೈಅತ್ ಅಥವಾ ಅನುಸರಣೆ ಪ್ರತಿಜ್ಞೆ ಮಾಡುವ ಸೌಭಾಗ್ಯವನ್ನು ನಮಗೆ ದಯಪಾಲಿಸುವುದರ ಮೂಲಕ ಅಲ್ಲಾಹನು ನಮ್ಮ ಮೇಲೆ ಬಹಳ ಹಿರಿದಾದ ಔದಾರ್ಯವನ್ನು ಮಾಡಿರುವನು.

ನಾನು ಪಾರಾಯಣ ಮಾಡಿರುವ ವಚನಗಳಲ್ಲಿ ಧರ್ಮದ ಸುದೃಢತೆಯ ಬಗ್ಗೆ ಮತ್ತು ಭಯದ ಸ್ಥಿತಿಯನ್ನು ಸಮಾಧಾನದ ಸ್ಥಿತಿಗೆ ಪರಿವರ್ತನೆ ಮಾಡುವುದರ ಕುರಿತು ವಾಗ್ದಾನ ನೀಡಲಾಗಿದೆ. ಆದರೆ ದೃಢನಂಬಿಕೆ, ಸತ್ಕರ್ಮಗಳು, ಆರಾಧನೆಯ ಹಕ್ಕುಗಳನ್ನು ಈಡೇರಿಸುವುದು ಮತ್ತು ಶಿರ್ಕಿನಿಂದ ಸಂಪೂರ್ಣವಾಗಿ ಬಿಟ್ಟುನಿಲ್ಲುವುದು ಈ ವಾಗ್ದಾನದ ಈಡೇರಿಕೆಗೆ ಇರುವ ನಿಬಂಧನೆಯಾಗಿದೆ. ಈ ಸಂಗತಿಗಳನ್ನು ಪಡೆಯಲಿಕ್ಕಾಗಿ ನಮಾಝ್ ನಿರ್ವಹಿಸುವುದು, ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮತ್ತು ಪ್ರವಾದಿಯ ಅನುಸರಣೆ ಬಹಳ ಮುಖ್ಯ. ಆದ್ದರಿಂದ ನಾವು ಈ ಸಂಗತಿಗಳನ್ನು ನೆನಪಿನಲ್ಲಿಡುವಾಗಲೇ ನಾವು ಖಿಲಾಫತಿನ ವರದಾನಗಳಿಂದ ಯಥಾರ್ಥವಾಗಿ ಪ್ರಯೋಜನ ಪಡೆಯುವವರಾಗುವೆವು. ಈ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಸುವಾರ್ತೆಯೊಂದಿಗೆ ಚಿಂತನೀಯ ವಿಷಯವು ಇದೆ. ಏಕೆಂದರೆ, ಈ ನಿಬಂಧನೆಗಳನ್ನು ಈಡೇರಿಸದಿದ್ದರೆ ಖಿಲಾಫತಿನ ಅನುಗ್ರಹಗಳಿಂದ ಸರಿಯಾಗಿ ಪ್ರಯೋಜನ ಪಡೆಯಲು ಸಾಧ್ಯವಲ್ಲ. ನಮಾಝ್ ಅನುಷ್ಠಾನ, ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ನೆರವೇರಿಸದಿದ್ದರೆ ನಾವು ಅಲ್ಲಾಹನ ಕೃಪೆ ಮತ್ತು ಅನುಗ್ರಹಗಳನ್ನು ಪಡೆಯುವವರಾಗಲಾರೆವು. ಆದ್ದರಿಂದ ಚರಿತ್ರೆಯನ್ನು ಅರಿಯುವುದು ಮತ್ತು ಖಿಲಾಫತ್ ದಿನವನ್ನು ಆಚರಿಸುವುದು ಸಾಕಾಗಲಾರದು. ನಮ್ಮ ವಿಶ್ವಾಸದ ಸ್ಥಿತಿಯೇನೆಂದು ನಾವು ಅವಲೋಕಿಸಬೇಕಾಗಿದೆ. ನಮ್ಮ ಪ್ರತಿಯೊಂದು ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಮಾತ್ರ ಪಡೆಯಲಿಕ್ಕಾಗಿ ಆಗುವಾಗಲೇ ಮನಸ್ಸಮಾಧಾನ ಮತ್ತು ನೆಮ್ಮದಿ ಲಭಿಸುವುದು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಒಂದು ಕಣದಷ್ಟೂ ಕೆಡುಕಿಲ್ಲದ ಕೃತ್ಯವನ್ನು ಸತ್ಕರ್ಮವೆಂದು ಹೇಳಲಾಗುತ್ತದೆ. ನೆನಪಿಡಿರಿ, ಮನುಷ್ಯನ ಕೃತ್ಯಗಳನ್ನು ಕದಿಯಲು ಯಾವಾಗಲೂ ಕಳ್ಳನು ಬರುತ್ತಿರುತ್ತಾನೆ. ಅದು ಯಾರು? ತೋರಿಕೆ, ಅಹಂಭಾವ, ವಿವಿಧ ರೀತಿಯ ದುಷ್ಕೃತ್ಯಗಳೇ ಆ ಕಳ್ಳರು. ಅವುಗಳನ್ನು ಮಾಡುತ್ತಿದ್ದೇನೆ ಎಂದು ಕೂಡ ಕೆಲವೊಮ್ಮೆ ಮನುಷ್ಯನಿಗೆ ಗೊತ್ತಿರುವುದಿಲ್ಲ. ದೌರ್ಜನ್ಯ, ಅಹಂಭಾವ, ತೋರಿಕೆ, ಮತ್ತು ಮನುಷ್ಯರ ಹಕ್ಕುಗಳನ್ನು ದೋಚುವ ಯೋಚನೆ ಕೂಡ ಬರದ ಕೃತ್ಯವನ್ನು ಸತ್ಕರ್ಮ ಎನ್ನಲಾಗುತ್ತದೆ. ಸತ್ಕರ್ಮ ಮಾಡುವ ಒಬ್ಬನೇ ಒಬ್ಬ ವ್ಯಕ್ತಿ ಮನೆಯಲ್ಲಿದ್ದರೆ, ಮನೆಯಲ್ಲಿರುವವರೆಲ್ಲ ಸುರಕ್ಷಿತವಾಗಿರುವರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾವು ಸ್ವತಃ ಸತ್ಕರ್ಮವೆಂದು ಭಾವಿಸುವ ಮತ್ತು ನಿಶ್ಚಯಿಸುವ ಸಂಗತಿಗಳನ್ನು ಸತ್ಕರ್ಮವೆಂದು ಪರಿಗಣಿಸಲಾಗದು. ಒಳಿತು ಎಂಬುದು ಕೆಡುಕಿನ ವಿರೋಧ ಪದವಾಗಿದೆ. ಆದ್ದರಿಂದ ಸತ್ಕರ್ಮಗಳಲ್ಲಿ ಯಾವುದೇ ರೀತಿಯ ಕೆಡುಕು ಇರಬಾರದು. ಸತ್ಕರ್ಮವೇನೆಂದೂ ಸರಿಯಾದ ತೀರ್ಮಾನವೇನೆಂದೂ ಸ್ವತಃ ವ್ಯಾಖ್ಯಾನಿಸಬಾರದು. ಖಿಲಾಫತಿನೊಂದಿಗೆ ಸಂಬಂಧವಿದೆ ಎಂದು ಹೇಳುವ ಇಂತಹ ಜನರ ಘೋಷಣೆಗಳು ಯಾವುದೇ ಪ್ರಯೋಜನಕ್ಕೆ ಬರದು. ಯಾರು ನಿಷ್ಠಾವಂತರಾಗಿ ಖಿಲಾಫತಿಗೆ ವಿಧೇಯರಾಗಿ ಮತ್ತು ಅದನ್ನು ಅನುಸರಿಸುತ್ತಾ ಇರುತ್ತಾರೋ ಅವರೇ ಯಥಾರ್ಥ ರೀತಿಯಲ್ಲಿ ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸುವವರಾಗಿರುವರು. ಅವರೇ ಖಿಲಾಫತಿನ ಸಂರಕ್ಷಕರು ಹಾಗೂ ಖಿಲಾಫತ್ ಅವರನ್ನು ಸಹ ಸಂರಕ್ಷಿಸುವುದು.

ಒಟ್ಟಿನಲ್ಲಿ, ಯಾವುದರಲ್ಲಿ ಜಮಾಅತ್ ಮತ್ತು ಕಾಲಘಟ್ಟದ ಖಲೀಫರ ನಡುವೆ ಇರುವ ಸಂಬಂಧ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಇರುವುದೋ ಆ ಖಿಲಾಫತೇ ನೈಜವಾದ ಖಿಲಾಫತ್ ಆಗಿದೆ. ಅದು ಧರ್ಮದ ಸುದೃಢತೆ ಮತ್ತು ನೆಮ್ಮದಿಗೆ ಕಾರಣವಾಗಿರುತ್ತದೆ. ಭೌತಿಕವಾದ ಉಪಾಯಗಳಿಂದ ಮತ್ತು ಪ್ರಯತ್ನಗಳಿಂದ ಖಿಲಾಫತನ್ನು ಸ್ಥಾಪಿಸಲು ಬಯಸುವ ಇತರ ಮುಸ್ಲಿಮರಿಗೆ ಅವರ ಉಪಾಯಗಳು ಮತ್ತು ಯೋಜನೆಗಳು ಯಾವುದೇ ಪ್ರಯೋಜನವನ್ನು ನೀಡದು. ಅವರು ಎಷ್ಟೇ ಪ್ರಯತ್ನಿಸುವವರಾದರೂ ಅಲ್ಲಾಹನು ತೀರ್ಮಾನಿಸಿದ ರೀತಿಯಲ್ಲೇ ಈಗ ಖಿಲಾಫತ್ ಜಾರಿಯಲ್ಲಿರುವುದು.

"ಅಲ್‍ವಸಿಯ್ಯತ್" ಎಂಬ ಕಿರುಹೊತ್ತಿಗೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಖಿಲಾಫತ್ ವ್ಯವಸ್ಥೆಯ

ಕುರಿತು ಬಹಳ ವಿಶದವಾಗಿ ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಸಹಾಯ ಮಾಡುವುದು ಅಲ್ಲಾಹನ ಸುನ್ನತ್ ಆಗಿದೆ. ಯಾವ ಒಳಿತನ್ನು ಲೋಕದಲ್ಲಿ ಹರಡಲು ಅಲ್ಲಾಹನು ಬಯಸುತ್ತಾನೋ ಅದರ ಬೀಜ ಬಿತ್ತುವಿಕೆಯನ್ನು ಪ್ರವಾದಿಗಳ ಮೂಲಕ ಅವನು ಮಾಡಿಸುತ್ತಾನೆ. ಆದರೆ ಅದರ ಪರಿಪೂರ್ಣತೆ ಅವರ ಕೈಗಳಿಂದ ಮಾಡಿಸುವುದಿಲ್ಲ. ಬದಲಾಗಿ ಅದು ಅಪೂರ್ಣವಾಗಿರುವಾಗಲೇ ಅವರಿಗೆ ಮರಣವನ್ನು ನೀಡುತ್ತಾನೆ. ಹೀಗೆ ಅದು ವಿಫಲಗೊಂಡಿದೆ ಎಂಬ ಭಯದ ಭಾವನೆ ಉಂಟಾಗುತ್ತದೆ. ವಿರೋಧಿಗಳಿಗೆ ನಗಾಡಲು, ಗೇಲಿಮಾಡಲು, ಮೂದಲಿಸಲು, ದೂಷಿಸಲು ಮತ್ತು ಛೇಡಿಸಲು ಸಮಯವನ್ನು ನೀಡುತ್ತಾನೆ. ಅವರು ಅಪಹಾಸ್ಯ ಮತ್ತು ಗೇಲಿ ಮಾಡಿದ ನಂತರ ಅಲ್ಲಾಹನು ತನ್ನ ಶಕ್ತಿಪ್ರತಾಪದ ಮತ್ತೊಂದು ಕೈಯನ್ನು ತೋರಿಸುತ್ತಾನೆ. ಹಾಗೆ ಅಲ್ಪ–ಸ್ವಲ್ಪ ಅಪೂರ್ಣಗೊಂಡಿದ್ದ ಉದ್ದೇಶಗಳನ್ನು ಮತ್ತು ನಿರ್ಧಾರಗಳನ್ನು ಪರಿಪೂರ್ಣಗೊಳಿಸಲು ಮಾರ್ಗಗಳನ್ನು ಉಂಟುಮಾಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮರಣ ಪ್ರತಿಯೊಂದು ಅಹ್ಮದಿಯನ್ನು ನಡುಗಿಸಿತು. ಅದೇ ವೇಳೆ ವಿರೋಧಿಗಳು ಖುಶಿಯಿಂದ ಸಂತೋಷವಾದ್ಯವನ್ನು ಬಾರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನರಾದಾಗ ಎಂತಹ ಕೆಟ್ಟಮಾತುಗಳನ್ನು ವಿರೋಧಿಗಳು ಹೇಳಿದರೆಂದರೆ, ಅವುಗಳನ್ನು ಕೇಳುವಾಗ ನಾಚಿಕೆಯಾಗುತ್ತದೆ. ಆ ವ್ಯರ್ಥಮಾತುಗಳನ್ನು ಪ್ರಸ್ತಾಪಿಸುವ ಆವಶ್ಯಕತೆಯಿಲ್ಲ. ಆದರೆ ಜಮಾಅತ್ ಅವ್ಯವಸ್ಥೆಗೊಂಡಿರುವುದಾಗಿ ಮತ್ತು ಅಹ್ಮದಿಯ್ಯತ್ತನ್ನು ಅಹ್ಮದಿಯರು ಬಿಟ್ಟಿರುವುದಾಗಿ ವಿರೋಧಿಗಳು ಹರಡಿದ ಸುಳ್ಳು ವಾರ್ತೆಗಳ ಬಗ್ಗೆ ಪ್ರಸ್ತಾಪಿಸುವೆನು. ಪೀರ್ ಜಮಾಅತಿನ ಅಲಿಶಾಹರ ಶಿಷ್ಯರು ಹೇಳಿದರು: ಮಿರ್ಝಾಯಿಗಳು ಪಶ್ಚಾತ್ತಾಪ ಮಾಡುತ್ತಾ ಇಸ್ಲಾಮಿಗೆ ಮರಳುತ್ತಿದ್ದಾರೆ. ಖ್ವಾಜಾ ಹಸನ್ ನಿಝಾಮಿ ಸಾಹಿಬ್ ಅಹ್ಮದಿಯರಿಗೆ ಹೀಗೆ ಸಲಹೆ ನೀಡಿದರು: ಮಿರ್ಝಾ ಸಾಹಿಬ್ ನಿಧನರಾಗಿರುವರು. ಈಗ ನಿಮ್ಮನ್ನು ನೋಡುವವರು ಯಾರೂ ಇಲ್ಲ. ಆದ್ದರಿಂದ ಅಹ್ಮದಿಯ್ಯತ್ ಉಪೇಕ್ಷಿಸಿರಿ ಮತ್ತು ನಮ್ಮೊಂದಿಗೆ ಬಂದು ಸೇರಿರಿ.

"ನಾನು ನಿನ್ನೊಂದಿಗೆ ಮತ್ತು ನಿನ್ನ ಪ್ರಿಯರೊಂದಿಗೆ ಇದ್ದೇನೆ" ಎಂದು ಅಲ್ಲಾಹನು ದಿವ್ಯವಾಣಿ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಹೇಳಿದ್ದು ಈ ವಿರೋಧಿಗಳಿಗೆ ಗೊತ್ತಿಲ್ಲ. ಇತರ ಪ್ರವಾದಿಗಳ ಮರಣದ ನಂತರ ಇದ್ದ ಹಾಗೆಯೇ ಅವರ ನಂತರವೂ ಖಿಲಾಫತಿನ ಪರಂಪರೆ ಶುರುವಾಗುವುದಾಗಿ ಹೇಳಿಕೊಂಡು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸಾಂತ್ವನ ಪಡಿಸಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಬಿಯೆಂದು ಹೇಳುವುದರಿಂದ ಹಿಂಜರಿಕೆ ತೋರಿಸುವ ಕೆಲವು ದುರ್ಬಲ ಅಹ್ಮದಿಯರಿಗೂ ಇದರಲ್ಲಿ ಉತ್ತರವಿದೆ. ಏಕೆಂದರೆ, ನನ್ನ ಜಮಾಅತ್ ನಬಿಯ ಜಮಾಅತಾಗಿದೆ ಮತ್ತು ನಾನು ನಬಿಯಾಗಿದ್ದೇನೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಇಲ್ಲಿ ಸ್ವತಃ ಹೇಳಿರುವರು. ಎರಡನೇ ಶಕ್ತಿಪ್ರಭಾವವಾದ ಖಿಲಾಫತ್ ಜಾರಿಯಾಗುವುದರ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾನು ಅಲ್ಲಾಹನ ಶಕ್ತಿಪ್ರಕಟಣೆಯ ಒಂದು ಸಂಪೂರ್ಣ ರೂಪವಾಗಿರುವೆನು. ನನ್ನ ನಂತರ ಬೇರೆ ಕೆಲವು ವ್ಯಕ್ತಿಗಳು ಅಲ್ಲಾಹನ ಎರಡನೇ ಶಕ್ತಿಪ್ರಭಾವದ ಪ್ರಕಟಣೆಯಾಗುವರು.

ಒಟ್ಟಿನಲ್ಲಿ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಯ ಪ್ರಕಾರ ಕಳೆದ 113 ವರ್ಷಗಳಿಂದ ಅಲ್ಲಾಹನ ಅನುಗ್ರಹಗಳು ಒಂದೊಂದಾಗಿ ಈಡೇರುವುದನ್ನು ನೋಡುತ್ತಿದ್ದೇವೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರ ಬಗ್ಗೆ **ಕರ್ಝೂನ್ ಗಝಟ್** ಹೀಗೆ ಬರೆದಿತ್ತು: "ಈಗ ಮಿರ್ಝಾಯಿಗಳಿಗೆ ಏನು ಬಾಕಿಯಿದೆ? ಅವರ ತಲೆ ಕಡಿದುಹೋಯಿತು. ಈಗ ಅವರ ಇಮಾಂ ಆಗಿರುವ ವ್ಯಕ್ತಿಯಿಂದ ಏನೂ ಆಗಲಿಕ್ಕಿಲ್ಲ. ಅವರು ನಿಮಗೆ ಮಸೀದಿಯಲ್ಲಿ ಖುರ್‌ಆನ್ ಓದಿಹೇಳುವವರು ಅಷ್ಟೇ." ಈ ಮಾತನ್ನು ಕೇಳಿಕೊಂಡು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: "ಹೌದು ಹಾಗೆಯೇ ಆಗಲಿ ನಿಮಗೆ ಪವಿತ್ರ ಖುರ್‌ಆನ್ ಓದಿಹೇಳಲು ನನಗೆ ಅಲ್ಲಾಹನು ಸೌಭಾಗ್ಯ ನೀಡಲಿ." ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಈ ಕಾರ್ಯವನ್ನು ಬಹಳ ಉತ್ತಮವಾಗಿ ನೆರವೇರಿಸಿದರು. ಅದರೊಂದಿಗೆ ಕಪಟವಿಶ್ವಾಸಿಗಳ ಮತ್ತು ಅಂಜುಮನಿನ ಕೆಲವು ಪ್ರಧಾನ ವ್ಯಕ್ತಿಗಳ ಪಿತೂರಿಗಳನ್ನು ಎಷ್ಟು ಶಕ್ತವಾಗಿ ಅದುಮಿ ಹಾಕಿದರು ಎಂದರೆ ಯಾರಿಗೂ ಯಾವುದೇ ರೀತಿಯ ಕೇಡುಂಟುಮಾಡಲು ಸಾಧ್ಯವಾಗಲಿಲ್ಲ.

ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಖಲೀಫರಾಗಿ ಚುನಾಯಿತರಾದಾಗ ಅಂಜುಮನಿನ ಬೆಂಬಲಿಗರು ಖಜಾನೆಯ ಎಲ್ಲವನ್ನೂ ತೆಗೆದುಕೊಂಡು ಅಲ್ಲಿಂದ ಹೊರಟುಹೋದರು. ಆದರೆ ಯಾವ ರೀತಿಯಲ್ಲಿ ಖಿಲಾಫತ್ ಮೂಲಕ ಅಲ್ಲಾಹನು ಜಮಾಅತಿಗೆ ಸುದೃಢತೆ ನೀಡಿದನು ಎಂದು ಲೋಕವು ನೋಡಿತು. ಯಾವ ಯುವಕನ ಕೈಯಿಗೆ ಅಲ್ಲಾಹನು ಖಿಲಾಫತಿನ ಲಗಾಮನ್ನು ನೀಡಿದನೋ ಆ ಯುವಕನು ಎಷ್ಟು ವೇಗವಾಗಿ ಜಮಾಅತನ್ನು ಹಿಡಿದುಕೊಂಡು ಅಭಿವೃದ್ಧಿಯ ಮಜಲುಗಳ ಮೇಲೆ ಹೆಜ್ಜೆ ಹಾಕುತ್ತಾ ಮುಂದಕ್ಕೆ ಧಾವಿಸಿದನು ಎಂಬುದಕ್ಕೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ 52 ವರ್ಷಗಳ ಖಿಲಾಫತ್ ಕಾಲಘಟ್ಟವು ಸಾಕ್ಷ್ಯವಹಿಸುತ್ತದೆ.

1965ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ನಿಧನರಾದಾಗ ಅಲ್ಲಾಹನು ಎರಡನೇ ಶಕ್ತಿ ಪ್ರಭಾವದ ಮೂರನೇ ಪ್ರಕಟನೆಯನ್ನು ಎಬ್ಬಿಸಿ ನಿಲ್ಲಿಸಿದನು. ಹೀಗೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹು ಅನ್‌ಹುರ ಮೂಲಕ ಲೋಕದೆಲ್ಲಡೆ ಜಮಾಅತಿನ ಪರಿಚಯವಾಯಿತು. 1974ರಲ್ಲಿ ಪಾಕಿಸ್ಥಾನದಲ್ಲಿ ಅಹ್ಮದಿಯರನ್ನು ಮುಸ್ಲಿಮೇತರರು ಎಂದು ಹೇಳಿಕೊಂಡು ಜಮಾಅತಿನ ಕೈಯಲ್ಲಿ ಭಿಕ್ಷಾಪಾತ್ರೆ ಕೊಡುವುದಾಗಿ ಹೇಳಿಕೊಂಡಾಗ ಅಲ್ಲಾಹನು ಶತ್ರುಗಳ ಯೋಜನೆಗಳನ್ನು ಮಣ್ಣುಪಾಲು ಮಾಡಿಕೊಂಡು ಜಮಾಅತಿಗೆ ಸಾಂಪತ್ತಿಕ ಸೌಲಭ್ಯಗಳ ಹೊಸ ಮಾರ್ಗಗಳನ್ನು ತೆರೆದನು.

1982ರಲ್ಲಿ ನಾಲ್ಕನೇ ಖಿಲಾಫತಿನ ಆರಂಭದಲ್ಲಿ ಜಮಾಅತಿನ ಅಭಿವೃದ್ಧಿಯನ್ನು ನೋಡಿಕೊಂಡು ಮೂರ್ಛೆ ಹೋಗಿದ್ದ ಶತ್ರುಗಳು, ಅಹ್ಮದಿಯಾ ಖಿಲಾಫತಿನ ಕೈಗಳನ್ನು ತಡೆದಿಡಲು ಯೋಜನೆಯನ್ನು ಮಾಡಿದರು. ಆದರೆ ಅಲ್ಲಾಹನು ತನ್ನ ಅಸಾಮಾನ್ಯವಾದ ಸಹಾಯದೊಂದಿಗೆ ಹಝ್ರ್‌ರತ್ ಖಲೀಫತುಲ್ ಮಸೀಹ್ ರಾಬಿಅ್‌ರಿಗೆ ವಲಸೆ ಹೋಗಲು ಏರ್ಪಾಡು ಮಾಡಿದನು. ಸೆಟ್‌ಲೈಟಿನ ಮೂಲಕ ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮಿನ ಸಂದೇಶವು ಮನೆಮನೆಗೆ ತಲುಪಲು ಶುರವಾಯಿತು.

2003ರಲ್ಲಿ ಹಝ್ರ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ನಿಧನವು ಜಮಾಅತಿಗೆ ಬಹಳ ದೊಡ್ಡ ದಕ್ಕೆಯಾಗಿತ್ತು. ಆದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಪ್ರಾರ್ಥನೆಗಳನ್ನು ಆಲಿಸಿದನು ಮತ್ತು ಭಯದ ಸ್ಥಿತಿಯನ್ನು ಮತ್ತೊಮ್ಮೆ ಸಮಾಧಾನಕ್ಕೆ ಬದಲಿಸಿದನು. ಇಸ್ಲಾಮಿನ ಆರಂಭಿಕ ಕಾಲಘಟ್ಟದಲ್ಲಿ ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯ ಪ್ರಕಾರ ನೇರಮಾರ್ಗದ ಖಿಲಾಫತ್ ನಾಲ್ವರು ಖಲೀಫರಿಗೆ ಸೀಮಿತವಾಗಿತ್ತು. ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆವಿರ್ಭಾವದ ನಂತರ ಇಸ್ಲಾಮಿನ ಚರಿತ್ರೆಯಲ್ಲಿ ಯಾವ ರೀತಿಯಲ್ಲಿ ಅನೇಕ ಹೊಸ ಬಾಗಿಲುಗಳು ತೆರೆದೆವೋ ಐದನೇ ಖಿಲಾಫತ್ ಸಹ ಅವುಗಳದ್ದೇ ಒಂದು ಭಾಗವಾಗಿದೆ. ಈ ಕಾಲಘಟ್ಟವು ಸಹ ಹಝ್ರ್‌ರತ್ ಪೈಗಂಬರ್[(ಸ)]ರ ಭವಿಷ್ಯವಾಣಿಗಳ ಪ್ರಕಾರವೇ ಆಗಿದೆ. ಈ ಕಾಲದಲ್ಲಿ ಅಹ್ಮದಿಯತ್ತಿನ ಪರಿಚಯ ಲೋಕದೆಲ್ಲಡೆ ಅಸಾಮಾನ್ಯವಾಗಿ ವರ್ಧಿಸಿದೆ. ಪವಿತ್ರ ಖುರ್‌ಆನಿನ ತರ್ಜುಮೆಯ ಕೆಲಸವಾಗಲಿ, ಹಝ್ರ್‌ರತ್ ಮಸೀಹ್ ಮೌಊದ್‌ರ ಗ್ರಂಥಗಳ ಪ್ರಕಾಶನದ ಕೆಲಸವಾಗಲಿ ಅಥವಾ ಎಂ.ಟಿ.ಎ.ಯ ಹರಡುವಿಕೆ ಆಗಿರಲಿ, ಪ್ರತಿಯೊಂದು ಮೈದಾನದಲ್ಲಿ ಅಸಾಮಾನ್ಯವಾದ ಪ್ರಗತಿಯನ್ನು ನಾವು ಕಾಣುತ್ತಿದ್ದೇವೆ. ಕೊರೋನ ವೈರಸಿನ ಸಾಂಕ್ರಾಮಿಕ ರೋಗದ ಕಾರಣದಿಂದ ಈಗ ಆನ್‌ಲೈನ್ ಮೀಟಿಂಗಿನ ಪರಂಪರೆ ಶುರವಾಯಿತು. ಅದರ ಮೂಲಕ ಕಾಲಘಟ್ಟದ ಖಲೀಫ ಮತ್ತು ಜಮಾಅತಿನ ಮಧ್ಯೆ ನೇರವಾದ ಸಂಪರ್ಕ ನಡೆಯುತ್ತಿದೆ. ಇವೆಲ್ಲವೂ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಅಲ್ಲಾಹನು ಮಾಡಿದ ವಾಗ್ದಾನದ ಪ್ರಕಾರವಾಗಿದೆ. ಆದ್ದರಿಂದ ನಾವು ಅಲ್ಲಾಹನ ಕೃತಜ್ಞತೆಯುಳ್ಳ ದಾಸರಾಗಿದ್ದುಕೊಂಡು ಅವನ ಮುಂದೆ ಬಾಗುವ ಮತ್ತು ವಿಧೇಯರಾಗಿ ಅವನನ್ನು ಅನುಸರಿಸುವ ಆವಶ್ಯಕತೆಯಿದೆ. ಜಮಾಅತಿನ ಪರಿಪೂರ್ಣ ಅಭಿವೃದ್ಧಿಯ ದೃಶ್ಯಗಳು ನಾವು ನಮ್ಮ ಕಣ್ಣುಗಳಿಂದ ನೋಡುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಮ್ಮ ಆರಾಧನೆಗಳು, ನಮ್ಮ ನಮಾಝ್‌ಗಳು ಮತ್ತು ನಮ್ಮ ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಂತಹದ್ದಾಗಲಿ – ಆಮೀನ್.

ಇಂದು ಪುನಃ ದುಆಗಳನ್ನು ಮಾಡಲು ನಾನು ಮನವಿ ಮಾಡುತ್ತೇನೆ. ಪಾಕಿಸ್ತಾನದ ಅಹ್ಮದಿಯರಿಗಾಗಿ ಮತ್ತು ಎಲ್ಲೆಲ್ಲ ಪೀಡಿತರಾದ ಅಹ್ಮದಿಯರು ಇರುವರೋ ಅವರಿಗಾಗಿ ದುಆ ಮಾಡಿರಿ. ಪೆಲಸ್ತೀನಿನ ಮುಸ್ಲಿಮರ ಸಮೇತ ದೌರ್ಜನ್ಯಕ್ಕೆ ಗುರಿಯಾಗಿರುವ ಎಲ್ಲ ಮುಸ್ಲಿಮರಿಗಾಗಿ ದುಆ ಮಾಡಿರಿ. ಅಲ್ಲಾಹನು ಎಲ್ಲರ ಕಷ್ಟತೆಗಳನ್ನು ದೂರಮಾಡಲಿ ಮತ್ತು ನಾವು ಬೇಗನೇ ಇಸ್ಲಾಂ ಮತ್ತು ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಾವುಟವನ್ನು ಹಾರಿಸುತ್ತಾ ಲೋಕದೆಲ್ಲೆಡೆ ಏಕದೇವವಿಶ್ವಾಸ ಸ್ಥಾಪನೆಯಾಗುವುದನ್ನು ನೋಡುವವರಾಗಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّاٰتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَآءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis**(atba)*

*At, Masjid Mubarak, Islamabad, Tilford, UK, On 28-05-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon